for more job news visit: www.kpscvaani.com

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ


**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ**

**ಉಪ ನಿರ್ದೇಶಕರ ಕಛೇರಿ,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆಡಳಿತ ಭವನ,**

**ರೂಮ್ ನಂ.209, ನವನಗರ, ಬಾಗಲಕೋಟೆ**

**ದೂರವಾಣಿ ಸಂಖ್ಯೆ: 08354-235708** **ಇ-ಮೇಲ್ - dd.wcd.karbgk@nic.in**


**ಸಂಖ್ಯೆ: ಉನಿಬಾ/ಮಮಅಇ/ಅಂಕಾಕ/ಅಂಸ/ ಅಂಸ/ಪ್ರ/2019-2020** **ದಿನಾಂಕ:** 31-01-2020

## -: ಅಧಿಸೂಚನೆ :-

ಸರಕಾರದ ಆದೇಶ ಸಂಖ್ಯೆ: ಮಮಇ/303/ಐಸಿಡಿ/2017 ದಿನಾಂಕ: 23.09.2017ರಲ್ಲಿ ತಿಳಿಸಿದ ಮಾರ್ಗಸೂಚಿಗಳಂತೆ, ಬಾಗಲಕೋಟೆ ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ ಹಾಗೂ ಮಾರ್ಚ-2020 ರ ಅಂತ್ಯಕ್ಕೆ ಖಾಲಿ ಆಗುವ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ನೇಮಕ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದೆ.

| | |
|---|---|
| **ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಪ್ರಾರಂಭದ ದಿನಾಂಕ** | 04-02-2020 |
| **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** | 06-03-2020 |
| **ವೆಬ್ ಸೈಟ್ ವಿಳಾಸ** | **www.anganwadirecruit.kar.nic.in** |

ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವದು ಅಥವಾ ಈ ಕೆಳಗಿನ ಕೋಷ್ಟಕದಲ್ಲಿರುವ ಶಿಶು ಅಭಿವೃದ್ಧಿ ಯೋಜನಾ ಕಛೇರಿ ಹೆಸರಿನ ಮುಂದೆ ಕಾಣಿಸಿದ ದೂರವಾಣಿಯನ್ನು ಸಂಪರ್ಕಿಸಲು ತಿಳಿಸಿದೆ.

| ಕ್ರ. ಸಂ | ಯೋಜನೆಯ ಹೆಸರು | ದೂರವಾಣಿ ಸಂಖ್ಯೆ |
|---|---|---|
| 1. | ಶಿಶು ಅಭಿವೃದ್ಧಿ ಯೋಜನೆ, ಬಾಗಲಕೋಟೆ | 08354-236293 |
| 2. | ಶಿಶು ಅಭಿವೃದ್ಧಿ ಯೋಜನೆ, ಬೀಳಗಿ | 08425-275321 |
| 3. | ಶಿಶು ಅಭಿವೃದ್ಧಿ ಯೋಜನೆ, ಹುನಗುಂದ | 08351-260116 |
| 4. | ಶಿಶು ಅಭಿವೃದ್ಧಿ ಯೋಜನೆ, ಬಾದಾಮಿ | 08357-220356 |
| 5. | ಶಿಶು ಅಭಿವೃದ್ಧಿ ಯೋಜನೆ, ಮುಧೋಳ | 08350-280162 |
| 6. | ಶಿಶು ಅಭಿವೃದ್ಧಿ ಯೋಜನೆ, ಜಮಖಂಡಿ | 08353-220265 |

for more job news visit: www.kpscvaani.com

ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳು ಖಾಲಿ ಇರುವ ಅಂಗನವಾಡಿ ಕೇಂದ್ರಗಳ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಅಂಗನವಾಡಿ ಕೇಂದ್ರದ ಹೆಸರು | ಗ್ರಾಮ ಪಂಚಾಯತ/ ಪಟ್ಟಣ ಪಂಚಾಯತ/ಪುರಸಭೆ/ ನಗರಸಭೆ ವಾರ್ಡ ನಂ. ಹೆಸರು | ಮೀಸಲಾತಿ | ಯೋಜನೆ |
|---|---|---|---|---|
| 1 | ಜನತಾಪ್ಲಾಟ್ ಕಲಾದಗಿ | ಕಲಾದಗಿ | ಎಸ್.ಸಿ | ಬಾಗಲಕೋಟೆ |
| 2 | ಶಿರೂರ-09(ದೊಡ್ಡ ಓಣಿ-01), ಶಿರೂರ | ಶಿರೂರ | ಇತರೆ | ಬಾಗಲಕೋಟೆ |
| 3 | ಹೊಸೂರು-01 | ಹೊಸೂರು | ಇತರೆ(ಅಲ್ಪ) | ಬಾಗಲಕೋಟೆ |
| 4 | ಬೀರಕಬ್ಬಿ ಕೇಂದ್ರ ಸಂ-04 | ಕಂದಗಲ್ಲ | ಇತರೆ | ಬೀಳಗಿ |
| 5 | ಹೆಗ್ಗೂರ ಕೇಂದ್ರ ಸಂ-06 | ಹೆಗ್ಗೂರ | ಇತರೆ | ಬೀಳಗಿ |
| 6 | ಬಾಡಗಿ ಆರ್.ಸಿ ಕೇಂದ್ರ ಸಂ-03 | ಬಾಡಗಿ | ಇತರೆ | ಬೀಳಗಿ |
| 7 | ಕೊರ್ತಿ ಶೆಡ್(ಮಿನಿ ಕೇಂದ್ರ) ಕೇಂದ್ರ ಸಂ-11 | ಕೊರ್ತಿ | ಇತರೆ | ಬೀಳಗಿ |
| 8 | ಕಮದತ್ತ-0320 | ಧನ್ನೂರ | ಇತರೆ | ಹುನಗುಂದ |
| 9 | ನಿಂಬಲಗುಂದಿ-0117 | ಐಹೊಳೆ | ಇತರೆ | ಹುನಗುಂದ |
| 10 | ಚೌಡಕಮಲದಿನ್ನಿ-1305 (ಮಿನಿ ಕೇಂದ್ರ) | ಬಿಸಲದಿನ್ನಿ | ಇತರೆ | ಹುನಗುಂದ |
| 11 | ಬೆಳಗಲಿ ವಾರ್ಡ ನಂ-02 ಅಂಗಡಿ ತೋಟ (ಮಿನಿ ಕೇಂದ್ರ) | ಬೆಳಗಲಿ | ಇತರೆ | ಮುದೋಳ |
| 12 | ಕಸಬಾ ಜಂಬಗಿ | ಕಸಬಾ ಜಂಬಗಿ | ಇತರೆ | ಮುದೋಳ |
| 13 | ಮಾರುತೇಶ್ವರ ಗುಡಿ, ಮುದ್ದಾಪೂರ | ಕಸಬಾ ಜಂಬಗಿ | ಇತರೆ | ಮುದೋಳ |
| 14 | ಲೋಕಾಪೂರ ಮಿನಿ ಕೇಂದ್ರ ಸಂ-510 | ಲೋಕಾಪೂರ | ಇತರೆ | ಮುದೋಳ |
| 15 | ಮಾಲಾಪೂರ ಕೇಂದ್ರ ನಂ-01 | ಸೋರಗಾಂವ | ಇತರೆ | ಮುದೋಳ |
| 16 | ಕರ್ಲಕೊಪ್ಪ ಕೇಂದ್ರ ನಂ-1 | ಕಾಕನೂರ | ಇತರೆ | ಬಾದಾಮಿ |
| 17 | ಚವಡಿ ಹತ್ತಿರ, ಚಿನಗುಂಡಿ | ಕುಂಚನೂರ | ಇತರೆ | ಜಮಖಂಡಿ |
| 18 | ಕವಟಗಿ ಆರ್.ಸಿ ಕೇಂದ್ರ | ಚಿಕ್ಕಪಡಸಲಗಿ | ಪರಿಶಿಷ್ಟ ಜಾತಿ | ಜಮಖಂಡಿ |

for more job news visit: www.kpscvaani.com

ಅಂಗನವಾಡಿ ಸಹಾಯಕಿ ಹುದ್ದೆಗಳು ಖಾಲಿ ಇರುವ ಅಂಗನವಾಡಿ ಕೇಂದ್ರಗಳ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಅಂಗನವಾಡಿ ಕೇಂದ್ರದ ಹೆಸರು | ಗ್ರಾಮ ಪಂಚಾಯತ/ ಪಟ್ಟಣ ಪಂಚಾಯತ/ಪುರಸಭೆ/ ನಗರಸಭೆ ವಾರ್ಡ ನಂ. ಹೆಸರು | ಮೀಸಲಾತಿ | ಯೋಜನೆ |
|---|---|---|---|---|
| 1 | ಹುಡ್ಕೋಕಾಲೋನಿ ನಗರಸಭೆ, ವಾರ್ಡ ನಂ -23,ಬಾಗಲಕೋಟೆ | ಬಾಗಲಕೋಟೆ | ಇತರೆ | ಬಾಗಲಕೋಟೆ |
| 2 | ಸೆಕ್ಟರ್ ನಂ-47 ನಗರಸಭೆ ವಾರ್ಡ ನಂ -23, ಬಾಗಲಕೋಟೆ | ಬಾಗಲಕೋಟೆ | ಇತರೆ | ಬಾಗಲಕೋಟೆ |
| 3 | ಕಿರಸೂರ-01 | ಭಗವತಿ | ಇತರೆ | ಬಾಗಲಕೋಟೆ |
| 4 | ಶಿರೂರ-12(ಅಂಗಟದವರ ಓಣಿ) | ಶಿರೂರ | ಇತರೆ | ಬಾಗಲಕೋಟೆ |
| 5 | ಗಲಗಲಿ ಕೇಂದ್ರ ಸಂ-11 | ಗಲಗಲಿ | ಪರಿಶಿಷ್ಠ ಜಾತಿ | ಬೀಳಗಿ |
| 6 | ಬೀಳಗಿ ವಾರ್ಡ ನಂ-02 ನಂದಿ ನಗರ, ಬೀಳಗಿ, ಕೇಂದ್ರ ಸಂ-14 | ಬೀಳಗಿ | ಇತರೆ | ಬೀಳಗಿ |
| 7 | ಕಂದಗಲ್ಲ ಕೇಂದ್ರ ಸಂ-13 | ಕಂದಗಲ್ಲ | ಇತರೆ | ಬೀಳಗಿ |
| 8 | ಮುಂಡಗನೂರ ಕೇಂದ್ರ ಸಂ-18 | ಕೋಲೂರು | ಪರಿಶಿಷ್ಠ ಜಾತಿ | ಬೀಳಗಿ |
| 9 | ಹುನಗುಂದ-0806 ತಳವಾರ ಓಣಿ ರಾಮಲಿಂಗ ನಗರ ಗುಡಿ ಹತ್ತಿರ) | ಹುನಗುಂದ | ಇತರೆ | ಹುನಗುಂದ |
| 10 | ಮರೋಳಕೊಪ್ಪ-0622 | ಮರೋಳ | ಇತರೆ | ಹುನಗುಂದ |
| 11 | ತೂರಮರಿ-1227 | ಬೂದಿಹಾಳ ಎಸ್.ಕೆ | ಇತರೆ | ಹುನಗುಂದ |
| 12 | ಮೆಟಗುಡ್ಡ, ಜನತಾ ಪ್ಲಾಟ | ಮೆಟಗುಡ್ಡ | ಇತರೆ | ಮುಧೋಳ |
| 13 | ಜಯನಗರ ವಾರ್ಡ ನಂ-05 ಮುಧೋಳ | ಮುಧೋಳ | ಇತರೆ | ಮುಧೋಳ |
| 14 | ಕೆರೂರ ಕೇಂದ್ರ ಸಂಖ್ಯೆ -10 ಮ್ಯಾಗಡೆ ಓಣಿ, ವಾರ್ಡ ನಂ-05 | ಕೆರೂರ | ಪರಿಶಿಷ್ಟ ಪಂಗಡ | ಬಾದಾಮಿ |
| 15 | ಗುಳೇದಗುಡ್ಡ ಕೇಂದ್ರ ಸಂಖ್ಯೆ-14 ನಡುವಿನ ಪೇಟೆ ವಾರ್ಡ ನಂ-04 | ಗುಳೇದಗುಡ್ಡ | ಇತರೆ | ಬಾದಾಮಿ |
| 16 | ಜೋಗಿ ಮಡ್ಡಿ ಏರಿಯಾ ,ಜಮಖಂಡಿ ಕಂದಾಯ ವಾರ್ಡ ನಂ-04 | ಜಮಖಂಡಿ | ಇತರೆ | ಜಮಖಂಡಿ |
| 17 | ಅಂಭಾ ಭವಾನಿ ಗುಡಿ ,ಜಮಖಂಡಿ ಕಂದಾಯ ವಾರ್ಡ ನಂ-04 | ಜಮಖಂಡಿ | ಇತರೆ | ಜಮಖಂಡಿ |
| 18 | ಬ್ರಹ್ಮಾನಂದ ನಗರ,ರಬಕವಿ ಕಂದಾಯ ವಾರ್ಡ ನಂ-05 | ರಬಕವಿ | ಇತರೆ | ಜಮಖಂಡಿ |
| 19 | ಪ್ರಭುದೇವರ ಗುಡಿ, ತೇರದಾಳ ಕಂದಾಯ ವಾರ್ಡ ನಂ-03 | ತೇರದಾಳ | ಇತರೆ | ಜಮಖಂಡಿ |
| 20 | ಮಾರ್ಕೇಟ ಗಲ್ಲಿ, ತೇರದಾಳ ಕಂದಾಯ ವಾರ್ಡ ನಂ-04 | ತೇರದಾಳ | ಇತರೆ | ಜಮಖಂಡಿ |
| 21 | ಕುಡಚಿ ನಾಕಾ ತೇರದಾಳ ಕಂದಾಯ ವಾರ್ಡ ನಂ-05 | ತೇರದಾಳ | ಇತರೆ | ಜಮಖಂಡಿ |
| 22 | ಸಮಾಜ ಮಂದಿರ, ಹರಿಜನಕೇರಿ ಚಿಕ್ಕಪಡಸಲಗಿ | ಚಿಕ್ಕಪಡಸಲಗಿ | ಪ.ಜಾ | ಜಮಖಂಡಿ |
| 23 | ಬಿರಾದಾರ ತೋಟ, ಚಿಕ್ಕಪಡಸಲಗಿ | ಚಿಕ್ಕಪಡಸಲಗಿ | ಇತರೆ | ಜಮಖಂಡಿ |

for more job news visit: www.kpscvaani.com

| | | | | |
|---|---|---|---|---|
| 24 | ಹರಿಜನಕೇರಿ,ಆಲಗೂರ | ಆಲಗೂರ | ಪ.ಜಾ | ಜಮಖಂಡಿ |
| 25 | ನರಸಗೊಂಡ ತೋಟ, ಆಲಗೂರ | ಆಲಗೂರ | ಇತರೆ | ಜಮಖಂಡಿ |
| 26 | ಪ್ರಾಥಮಿಕ ಶಾಲಾ ಆವರಣ,ಸನಾಳ | ಕುಂಬಾರಹಳ್ಳ | ಇತರೆ | ಜಮಖಂಡಿ |
| 27 | ಮಲ್ಲಿಕಾರ್ಜುನ ಗುಡಿ, ಕಡಕೋಳ | ಕಂಕಣವಾಡಿ | ಇತರೆ | ಜಮಖಂಡಿ |
| 28 | ಗೋಂಬಿ ಗುಡ್ಡ ಏರಿಯಾ,ಕುಲಹಳ್ಳಿ | ಕುಲಹಳ್ಳಿ | ಇತರೆ | ಜಮಖಂಡಿ |

ಸೂಚನೆಗಳು

1. ಅಂಗನವಾಡಿ ಕಾರ್ಯಕರ್ತೆ/ಸಹಾಯಕಿ ಹುದ್ದೆಗಳಿಗೆ ಅರ್ಜಿಗಳನ್ನು ಆನ್ ಲೈನ್ ಮೂಲಕವೇ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಇತರೆ ಯಾವುದೇ ಮೂಲದಿಂದ ಸಲ್ಲಿಸಲು ಅವಕಾಶವಿರುವುದಿಲ್ಲಾ.ಅವುಗಳನ್ನು ಪರಿಗಣಿಸಲಾಗುವುದಿಲ್ಲ.
2. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ಈ ಕೆಳಗಿನ ನೇಮಕಾತಿಯ ಸರ್ಕಾರದ ಮಾರ್ಗಸೂಚಿ **ಸಂ/ಮಮಇ/303/ಐಸಿಡಿ/2017/ದಿನಾಂಕ: 23-09-2017** ಹಾಗೂ ನಿಬಂಧನೆಗಳನ್ನು ವೆಬ್ ಸೈಟ್ ನಲ್ಲಿ ಅಳವಡಿಸಲಾಗಿದ್ದು, ಇದರಲ್ಲಿರುವ ಸೂಚನೆಗಳನ್ನು ಸ್ಪಷ್ಟವಾಗಿ ಓದಿಕೊಂಡು ನೀಡಲಾಗಿರುವ ಸೂಚನೆಯಂತೆ ಅರ್ಜಿಗಳನ್ನು ಭರ್ತಿ ಮಾಡಿ ಅವಶ್ಯಕ ಮೂಲ ದಾಖಲೆಗಳನ್ನು ಸ್ಪಷ್ಟವಾಗಿ ಕಾಣುವಂತೆ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿ ಅರ್ಜಿ ಸಲ್ಲಿಸುವುದು. ಅಸ್ಪಷ್ಟವಾಗಿ ಕಾಣುವ ದಾಖಲಾತಿಗಳಿದ್ದ ಅರ್ಜಿಗಳನ್ನು ತಿರಸ್ಕರಿಸಲಾಗುವುದು
3. **ಆನ್-ಲೈನ್ ಅರ್ಜಿಯೊಂದಿಗೆ ಯಾವುದೇ ಅಗತ್ಯ ದಾಖಲೆಯನ್ನು ಸಲ್ಲಿಸದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**
4. **ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಲ್ಲಿ ಕ್ರ.ಸಂ-03, ಹಾಗೂ ಅಂಗನವಾಡಿ ಸಹಾಯಕಿಯರ ಹುದ್ದೆಗಳಲ್ಲಿ ಕ್ರಸಂ-1, 2, 16, 17, 19, 21, 23, 25 ಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನ್ನಡ ಭಾಷೆಯೊಂದಿಗೆ ಆಯಾ ಅಲ್ಪ ಸಂಖ್ಯಾತ ಸಮುದಾಯದ ಭಾಷೆ ಬಲ್ಲವರಾಗಿರಬೇಕು.**
5. **ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಲು 18-35 ವರ್ಷ ವಯೋಮಿತಿಯೊಳಗಿರಬೇಕು.**
6. **ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗೆ ಸ್ಥಳೀಯರಾಗಿರಬೇಕು. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದ ಒಂದು (1) ವರ್ಷದೊಳಗೆ ಸಂಬಂಧಪಟ್ಟ ತಹಶೀಲ್ದಾರರಿಂದ/ ಉಪ ತಹಶೀಲ್ದಾರರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.**
7. **ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು. ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವಂತಿಲ್ಲ.**
8. **ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಮಂಡಳಿ ನಡೆಸುವ ಮುಕ್ತ ಶಾಲೆ / ಮುಕ್ತ ಶಾಲೆ/ ಮುಕ್ತ ವಿದ್ಯಾಲಯಗಳಲ್ಲಿ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ / ದ್ವಿತೀಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜಶಾಸ್ತ್ರ / ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು, ಪ್ರಮಾಣ ಪತ್ರ / ಅಂಕಪಟ್ಟಿಯು ಗರಿಷ್ಠ 625, ಕನಿಷ್ಠ 219 ಅಂಕಗಳನ್ನು ಹೊಂದಿರುವ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು.**
9. ಬೇರೆ ರಾಜ್ಯಗಳ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದು, ಕನ್ನಡವನ್ನು ಪ್ರಥಮ / ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಿದ್ದರೂ, ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಆ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ, ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಯನ್ನು ಮಾತ್ರ ಪರಿಗಣಿಸಲಾಗುವುದು.

for more job news visit: www.kpscvaani.com

10. ಅಂಗನವಾಡಿ ಕಾರ್ಯಕರ್ತೆಯರು ಶಾಲಾ ಪೂರ್ವ ಶಿಕ್ಷಣವನ್ನು ಹಾಗೂ ದಾಖಲೆಗಳನ್ನು ಕನ್ನಡದಲ್ಲಿ ನಿರ್ವಹಿಸಬೇಕಾಗಿರುವುದರಿಂದ ಅಭ್ಯರ್ಥಿಗಳು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದ್ದರೂ ಸಹ ಅವರು ಕನ್ನಡ ಭಾಷೆಯನ್ನು ಪ್ರಥಮ / ದ್ವಿತೀಯ ಭಾಷೆಯಾಗಿ ವ್ಯಾಸಂಗ ಮಾಡಿರಬೇಕು ಹಾಗೂ ಮಾತೃಭಾಷೆ ಕನ್ನಡವಲ್ಲದೇ ಇರುವ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯು, ಆಯ್ಕೆ ಸಮಯದಲ್ಲಿ ಸಂದರ್ಶನ ಏರ್ಪಡಿಸಿ , ಹಾಗೂ ಅವಶ್ಯವಿದ್ದಲ್ಲಿ ಕನ್ನಡ ಭಾಷೆಯ ಜ್ಞಾನದ ಕುರಿತಂತೆ ಓದಿಸಿ, ಬರೆಸಿ, ಅವರ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಿ ಅಂತಹ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಕುರಿತು ಆಯ್ಕೆ ಸಮಿತಿಯು ನಿರ್ಧರಿಸುತ್ತದೆ.

11. ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸುವವರು ಕನಿಷ್ಠ 4 ನೇ ತರಗತಿ ತೇರ್ಗಡೆ, ಗರಿಷ್ಠ 9 ನೇ ತರಗತಿವರೆಗೆ ತೇರ್ಗಡೆ ಹೊಂದಿರಬೇಕು. ಇದರಲ್ಲಿ ಹೆಚ್ಚಿನ ವಿದ್ಯಾರ್ಹತೆಯುಳ್ಳವರನ್ನು ಆಯ್ಕೆ ಮಾಡಲಾಗುವುದು. 9 ನೇ ತರಗತಿಗಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

12. ಒಂದೇ ವಿದ್ಯಾರ್ಹತೆಯುಳ್ಳ ಒಂದಕ್ಕಿಂತ ಹೆಚ್ಚು ಅರ್ಜಿ ಬಂದಿದ್ದಲ್ಲಿ ಹೆಚ್ಚ ಅಂಕಗಳಿಸಿದವರನ್ನು ಆಯ್ಕೆ ಮಾಡಲಾಗುವುದು.

13. ಶೇಕಡಾ 25 ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ (ಮುಸ್ಲಿಂಮರು , ಕ್ರಿಶ್ಚಿಯನರು, ಜೈನರು, ಬೌದ್ಧರು, ಪಾರ್ಸಿಗಳು ಮತ್ತು ಸಿಕ್ಕರು) ಜನಸಂಖ್ಯೆಯಿರುವ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡ ಭಾಷೆಯೊಂದಿಗೆ ಆಯಾ ಅಲ್ಪ ಸಂಖ್ಯಾತ ಸಮುದಾಯದ ಭಾಷೆ ಬಲ್ಲವರನ್ನು ಕಾರ್ಯಕರ್ತೆ / ಸಹಾಯಕಿ ಹುದ್ದೆಗೆ ಆಯ್ಕೆ ಮಾಡಲಾಗುವುದು.

14. ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗೆ ಸಂಬಂಧಿಸಿದ ಅಂಗನವಾಡಿ ಕೇಂದ್ರದ ಗ್ರಾಮಾಂತರ ಪ್ರದೇಶದ ಕಂದಾಯ ಗ್ರಾಮ ಹಾಗೂ ನಗರ ಪ್ರದೇಶದ ಕಂದಾಯ ವಾರ್ಡ್ ಗಳನ್ನು ಪರಿಗಣಿಸಲಾಗುವುದು. ಚುನಾವಣಾ ವಾರ್ಡಗಳನ್ನು ಪರಿಗಣಿಸಲಾಗುವುದಿಲ್ಲ.

<u>ಆಯ್ಕೆ ಆದ್ಯತೆ</u>

**ಈ ಕೆಳಕಂಡಂತೆ ಆದ್ಯತೆ ಪಡೆಯಲು ಇಚ್ಚಿಸುವ ಅರ್ಜಿದಾರರು ನಿಗದಿತ ವಿದ್ಯಾರ್ಹತೆ ಹೊಂದಿದ್ದು, ವಯೋಮಿತಿಯೊಳಗೆ ಮತ್ತು ಸ್ಥಳೀಯವರಾಗಿರಬೇಕಾಗಿರುವುದು ಕಡ್ಡಾಯ.**

15. ಆಸಿಡ್ ದಾಳಿಗೆ ತುತ್ತಾದ ಮಹಿಳೆಯು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೇ ಮೊದಲ ಆದ್ಯತೆ ಮೇರೆಗೆ ನೇರವಾಗಿ ಆಸಿಡ್ ದಾಳಿಗೆ ತುತ್ತಾದ ಮಹಿಳೆಯನ್ನು ಆಯ್ಕೆ ಮಾಡಲಾಗುವುದು.

16. ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗಳಿಗೆ ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ / ಮಾಜಿ ನಿವಾಸಿಗಳು ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಆಸಿಡ್ ದಾಳಿಗೆ ತುತ್ತಾದ ಮಹಿಳೆಯನ್ನು ಹೊರತುಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಹೊರತುಪಡಿಸಿ ಎರಡನೇ ಆದ್ಯತೆ ಮೇರೆಗೆ ನೇರವಾಗಿ ಅಂತಹ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.

<u>ವಿಧವೆಯರಿಗೆ ಆದ್ಯತೆ</u>

17. (ಅ) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ಹುದ್ದೆಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಆ್ಯಸಿಡ ದಾಳಿಗೆ ಒಳಗಾದ ಮಹಿಳೆ, ಇಲಾಖೆಯ ಸಂಸ್ಥೆಗಳಲ್ಲಿ ನಿವಾಸಿ ಅಭ್ಯರ್ಥಿಗಳನ್ನು ಹೊರತುಪಡಿಸಿ, ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೇ 3 ನೇ ಆದ್ಯತೆ ಮೇರೆಗೆ ನೇರವಾಗಿ ವಿಧವಾ ಅಭ್ಯರ್ಥಿಯನ್ನೇ ಆಯಾ ಹುದ್ದೆಗೆ ಆಯ್ಕೆ ಮಾಡಲಾಗುವುದು. ಒಂದು ವೇಳೆ ಅರ್ಜಿ ಸಲ್ಲಿಸಿದ ನಂತರ ವಿಧವೆಯಾದಲ್ಲಿ ಪರಿಗಣಿಸಲಾಗುವುದಿಲ್ಲ.

for more job news visit: www.kpscvaani.com

(ಆ) ವಿಧವೆಯರು ಅರ್ಜಿ ಸಲ್ಲಿಸಿದಾಗ ವಿಧವೆಯರಲ್ಲಿ , ಆತ್ಮ ಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನೀಡಲಾಗುವುದು.

(ಇ) ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ, ವಾಸಸ್ಥಳ ಧೃಢೀಕರಣವನ್ನು ಸಲ್ಲಿಸಿರುತ್ತಾರೆ, ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸಲಾಗುವುದು.

(ಈ) ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು.

<u>ಅಂಗವಿಕರ ಆದ್ಯತೆ</u>

18. ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ ಅಂಗವಿಕಲರು ಅರ್ಜಿ ಸಲ್ಲಿಸಿದಾಗ, ಮಾರ್ಗಸೂಚಿ 3(1) (2) ಮತ್ತು (3) ನೇಯವರನ್ನು ಹೊರತುಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೇ ನಾಲ್ಕನೆ ಆದ್ಯತೆ ಮೇರೆಗೆ ನೇರವಾಗಿ ಅಂತಹ ಅಂಗವಿಕಲ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.

19. ಅಂಗವಿಲಕರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೋ ಆ ವಾಸಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸಲಾಗುವುದು.

20. ಅಂಗನವಾಡಿ ಕಾರ್ಯಕರ್ತೆ ಹುದ್ದೆಯಲ್ಲಿ 3-6 ವರ್ಷದ ಮಕ್ಕಳಿಗೆ ಆಟ ಮತ್ತು ಅಭಿನಯ ಗೀತೆಗಳ ಮೂಲಕ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದ್ದು ಚಟುವಟಿಕೆ ವೇಳೆಯಲ್ಲಿ ಮಕ್ಕಳನ್ನು ಹಿಡಿದೆತ್ತಿ ನಿಲ್ಲಿಸಲು ಹಾಗೂ ಅಭಿನಯ ಮಾಡಿ ತೋರಿಸಬೇಕಾಗಿರುತ್ತದೆ. ವೃತ್ತ ಸಭೆ, ತಾಯಂದಿರ ಸಭೆ ಮತ್ತು ಮನೆ ಭೇಟಿ ನಿರ್ವಹಿಸಬೇಕಾಗಿರುತ್ತದೆ. ಆದ ಕಾರಣ ಕಿವುಡರು ಮತ್ತು ಮೂಕರು, ಕುರುಡರು, ಬುದ್ಧಿ ಮಾಂದ್ಯರು, ಮಾನಸಿಕ ಅಸ್ವಸ್ಥರು ಕಾರ್ಯಕರ್ತೆ ಹುದ್ದೆಗೆ ಅರ್ಹರಾಗಿರುವುದಿಲ್ಲ.

21. ಅಂಗನವಾಡಿ ಸಹಾಯಕಿಯ ಹುದ್ದೆಯಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಬೇಯಿಸಿ / ಸಿದ್ಧಪಡಿಸಿ ಉಣಬಡಿಸುವುದು, ಕೇಂದ್ರವನ್ನು ಸ್ವಚ್ಚಗೊಳಿಸುವುದು, ಮಕ್ಕಳನ್ನು ಅವರ ಮನೆಗಳಿಂದ ಕೇಂದ್ರಕ್ಕೆ ಕರೆತರುವುದು ಹಾಗೂ ಕಾರ್ಯಕರ್ತೆಯು ವೃತ್ತಸಭೆ, ತಾಯಂದಿರ ಸಭೆ ಮತ್ತು ಮನೆ ಭೇಟಿಗೆ ಹೋದಾಗ ಅಂಗನವಾಡಿ ಕೇಂದ್ರದ ಜವಾಬ್ದಾರಿಯನ್ನು ನಿರ್ವಹಿಸಬೇಕು. ಆದ್ದರಿಂದ ಸಹಾಯಕಿ ಹುದ್ದೆಗೆ ಅಂಗವಿಕಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

22. ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಇತರೆ ದೈಹಿಕ ಅಂಗವೈಕಲ್ಯತೆ ಶೇ 60 ಮೀರದಂತೆ ಇರುವವರು ಅರ್ಜಿ ಸಲ್ಲಿಸಬಹುದಾಗಿದೆ. ಅಂಗಿಕೃತ ಪ್ರಾಧಿಕಾರ (ಜಿಲ್ಲಾ ವೈದ್ಯಕೀಯ ಮಂಡಳಿ) ದಿಂದ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

23. ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅಂಗವಿಕಲತೆಯ ಪ್ರಮಾಣದ ಬಗ್ಗೆ ಸಂಶಯ ಉಂಟಾದಲ್ಲಿ ಆ ಅಭ್ಯರ್ಥಿಯನ್ನು ಆಯ್ಕೆ ಸಮಿತಿಯ ಮುಂದೆ ಖುದ್ದು ಹಾಜರಾಗಲು ಸೂಚಿಸಿ ,ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಆಯ್ಕೆ ಸಮಿತಿಯು ಪರಿಶೀಲಿಸಿ ನಿರ್ಧರಿಸುತ್ತದೆ.

24. ಒಂದೇ ಹುದ್ದೆಗೆ ಇಬ್ಬರು ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು.

25. ಮಾಜಿ ದೇವದಾಸಿಯ ಮಗಳು, ಯೋಜನಾ ನಿರಾಶ್ರಿತರು, ವಿಚ್ಛೇದಿತ ಮಹಿಳೆಯರು ಹಾಗೂ ಪರಿತ್ಯಕ್ತೆಯರು ಹೆಚ್ಚಿನ 5 ಬೋನಸ್ ಅಂಕಗಳಿಗೆ ಅರ್ಹರಾಗಿರುತ್ತಾರೆ. ಪ್ರತಿ ವಿನಾಯಿತಿಗೂ 5 ಬೋನಸ್ ಅಂಕ ನೀಡಲಾಗುವುದು, ಆದರೆ ಯಾವುದೇ ಕಾರಣಕ್ಕೂ ಅವರು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಕ್ಕೆ ಶೇಕಡಾ 5(5%) ಅಂಕ ನೀಡಲಾಗುವುದಿಲ್ಲ. ಬೋನಸ್ ಅಂಕ ಪಡೆಯಲು ಸಂಬಂಧಿಸಿ ದಾಖಲೆಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಿ ಸಲ್ಲಿಸಿರಬೇಕು.

for more job news visit: www.kpscvaani.com

26. ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆ ಕಂಡು ಬಂದಲ್ಲಿ ನೇಮಕಾತಿ ಪ್ರಾಧಿಕಾರವು ಚರ್ಚಿಸಿ ನಿಯಮಾನುಸಾರ ಕ್ರಮವಹಿಸಿದ ಬಗ್ಗೆ ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

-: ಆನ್-ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು :-

1. ಅರ್ಜಿ ನಿಗದಿತ ನಮೂನೆಯಲ್ಲಿ (ಆನ್-ಲೈನ್).
2. ಜನನ ಪ್ರಮಾಣ ಪತ್ರ (ಜನನ ಪ್ರಮಾಣ ಪತ್ರ/ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ) 18 ರಿಂದ 35 ವರ್ಷ ವಯೋಮಿತಿಯೊಳಗಿರಬೇಕು.
3. ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ.(ಅಂಗನವಾಡಿ **ಕಾರ್ಯಕರ್ತೆಯರ ಹುದ್ದೆಗೆ ಅರ್ಜಿ ಸಲ್ಲಿಸುವವರು ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು ಹೆಚ್ಚಿನ ವಿಧ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವಂತಿಲ್ಲ.**
4. ತಹಶೀಲ್ದಾರರು / ಉಪತಹಶೀಲ್ದಾರರಿಂದ ಒಂದು(1) ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ.
5. ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ.
6. ಪತಿಯ ಮರಣ ಪ್ರಮಾಣ ಪತ್ರ.( ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವದಿಲ್ಲ)
7. ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಯಂದು ಉಪವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
8. ಅಂಗವಿಕಲತೆ ಪ್ರಮಾಣ ಪತ್ರ. **ಅಂಗಿಕೃತ ಪ್ರಾಧಿಕಾರ (ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದು ಸಲ್ಲಿಸತಕ್ಕದ್ದು.** (ಅಂಗವಿಕಲ ವೇತನದ ದೃಢೀಕರಣವನ್ನು ಪರಿಗಣಿಸುವದಿಲ್ಲ)
9. ವಿಚ್ಛೇಧನ ದೃಢೀಕರಣವನ್ನು ಪತ್ರ.(ನ್ಯಾಯಾಲದಿಂದ ಪಡೆದಿರಬೇಕು)
10. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪ್ರಮಾಣ ಪತ್ರ.
11. ಪರಿತ್ಯಕ್ತೆ ಬಗ್ಗೆ ಗ್ರಾಮ ಪಂಚಾಯತಿಯಿಂದ ಪಡೆದ ಪ್ರಮಾಣ ಪತ್ರ.
12. ಇಲಾಖೆಯ ಸುಧಾರಣಾ ಸಂಸ್ಥೆ /ರಾಜ್ಯ ಮಹಿಳಾ ನಿಲಯಗಳ ನಿವಾಸಿ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
13. ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ

**ಜಿಲ್ಲಾಧಿಕಾರಿಗಳು**
ಹಾಗೂ ಅಧ್ಯಕ್ಷರು, ಅಂಗನವಾಡಿ ಕಾರ್ಯಕರ್ತೆ
ಹಾಗೂ ಅಂಗನವಾಡಿ ಸಹಾಯಕಿಯರ ಆಯ್ಕೆ
ಸಮಿತಿ ಬಾಗಲಕೋಟೆ

ಪ್ರತಿಯನ್ನು:

1. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬಾಗಲಕೋಟ.**ಇವರ ಮಾಹಿತಿಗಾಗಿ.**
2. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಬಾಗಲಕೋಟೆ/ ಬೀಳಗಿ/ ಹುನಗುಂದ/ ಬದಾಮಿ/ ಮುಧೋಳ/ ಜಮಖಂಡಿ, **ಇವರ ಮಾಹಿತಿಗಾಗಿ** ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ.

for more job news visit: www.kpscvaani.com

3. ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬಾಗಲಕೋಟೆ/ ಬೀಳಗಿ/ ಹುನಗುಂದ/ ಬದಾಮಿ/ ಮುಧೋಳ/ ಜಮಖಂಡಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ.
4. ತಾಲೂಕ ಸಮಾಜ ಕಲ್ಯಾಣಾಧಿಕಾರಿಗಳು, ಬಾಗಲಕೋಟೆ/ ಬೀಳಗಿ/ ಹುನಗುಂದ/ ಬದಾಮಿ/ ಮುಧೋಳ/ ಜಮಖಂಡಿ, **ಇವರ ಮಾಹಿತಿಗಾಗಿ** ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗಳ ಮೂಲಕ.
5. ಸಂಭಂದಿಸಿದ ಗ್ರಾಮ ಪಂಚಾಯತಿ/ ಪಟ್ಟಣ ಪಂಚಾಯತಿ/ ಪುರಸಭೆ/ ನಗರಸಭೆ ಪ್ರಕಟಣೆಗಾಗಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ.
6. ಸಂಭಂದಿಸಿದ ಗ್ರಾಮ ಪಂಚಾಯತಿ/ ಶಾಲಾ ಮುಖ್ಯೋಪಾದ್ಯಾಯರು, ಹಿರಿಯ/ಕಿರಿಯ ಶಾಲೆಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ.
7. ಸಂಭಂದಿಸಿದ ಕೃಷಿ ಸಂಪರ್ಕ ಕೇಂದ್ರ, ಗ್ರಾಮ ಆರೋಗ್ಯ ಕೇಂದ್ರ/ ಗ್ರಾಮ ಲೆಕ್ಕಾಧಿಕಾರಿಗಳ ಕಛೇರಿ/ ಅಂಗನವಾಡಿ ಕೇಂದ್ರದಲ್ಲಿ ಪ್ರಕಟಣೆಗಾಗಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ.
8. ಕಛೇರಿ ಕಡತಕ್ಕೆ.